ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

# ನೇಮಕಾತಿ ಅಧಿಸೂಚನೆ

**ವಿಷಯ:-** ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿ ಹೊಸದಾಗಿ ಸೃಜಿಸಲಾದ 08 ಸಿ.ಇ.ಎನ್ ಪೊಲೀಸ್ ಠಾಣೆಗಳನ್ನು ಬಲಪಡಿಸಲು ಅವಶ್ಯಕವಿರುವ ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ಭರ್ತಿ ಮಾಡುವ ಕುರಿತು

* * * * * *

ಸಂ: COPBCP/EST/EST3(MISC)/34/2023 ದಿ: /01 /2024

ಬೆಂಗಳೂರು ನಗರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ದಿನೆ ದಿನೇ ಏರಿಕೆ ಆಗುತ್ತಿರುವುದುರಿಂದ ಹಾಗೂ ಸಾರ್ವಜನಿಕರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಕಾನೂನಿನನ್ವಯ ಸಬಲಗೊಳಿಸಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿ ಹೊಸದಾಗಿ ಸೃಜಿಸಲಾದ 08 ಸಿ.ಇ.ಎನ್ ಪೊಲೀಸ್ ಠಾಣೆಗಳನ್ನು ಬಲಪಡಿಸಲು ಪರಿಣಿತ ತಾಂತ್ರಿಕ ಸಿಬ್ಬಂದಿಗಳನ್ನು ಹೊಂದುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರವು ಜಂಟಿ ಪೊಲೀಸ್ ಆಯುಕ್ತರು, ಅಪರಾಧ, ಬೆಂಗಳೂರು ನಗರ ರವರ ಅಧ್ಯಕ್ಷತೆಯಲ್ಲಿ ನೇಮಕಾತಿ ಸಮಿತಿಯನ್ನು ರಚಿಸಿದ್ದು, ಸದರಿ ನೇಮಕಾತಿ ಸಮಿತಿಯ ನಿರ್ಣಯ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ74 ಪಿಓಪಿ 2021 ದಿನಾಂಕ:19/08/2021 ರ ಅನ್ವಯ ಸಿ.ಇ.ಎನ್ ಪೊಲೀಸ್ ಠಾಣೆಗಳಿಗೆ ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ ವಿಳಾಸ www.ksp.gov.in ಮುಖಾಂತರ ಅರ್ಜಿಗಳನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು, ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಈ ಕೆಳಕಂಡ ಇ-ಮೇಲ್ ವಿಳಾಸ dcpadminbcp@ksp.gov.in ಗೆ ಕಳುಹಿಸಲು ಸೂಚಿಸಿದೆ.

1. ಬಯೋಡೇಟ / ರೆಸ್ಯೂಮ್
2. ಒಂದು ಬಿಳಿ ಹಾಳೆಯ ಮೇಲೆ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವ ಚಿತ್ರವನ್ನು ಅಂಟಿಸಿ ಅದರ ಕೆಳಗೆ ಸಹಿ ಮಾಡಿರುವ ಮೂಲ ಪ್ರತಿ
3. ಎಸ್.ಎಸ್.ಎಲ್.ಸಿ ಅಂಕಪಟ್ಟಿ (ದೃಢೀಕೃತ ಜೆರಾಕ್ಸ್ ಪ್ರತಿ)
4. ವಿದ್ಯಾರ್ಹತೆಯ ಪ್ರಮಾಣ ಪತ್ರ (ದೃಢೀಕೃತ ಜೆರಾಕ್ಸ್ ಪ್ರತಿ)
5. ಆಧಾರ್ ಕಾರ್ಡ್/ ಪಾನ್ ಕಾರ್ಡ್ / ಡ್ರೈವಿಂಗ್ ಲೈಸ್‌ನ್ಸ್ (ದೃಢೀಕೃತ ಜೆರಾಕ್ಸ್ ಪ್ರತಿ)
6. ಕೆಲಸದ ಅನುಭವದ ಪ್ರಮಾಣ ಪತ್ರ

**ಸೂಚನೆ:-**

ಅಭ್ಯರ್ಥಿಗಳು ಅರ್ಜಿಗಳನ್ನು ಭರ್ತಿ ಮಾಡುವ ಮುನ್ನ ನೇಮಕಾತಿ ಅಧಿಸೂಚನೆಯಲ್ಲಿನ ನಿಯಮ/ಷರತ್ತುಗಳನ್ನು ಗಮನವಿಟ್ಟು ಓದಿಕೊಳ್ಳುವುದು. ಅರ್ಜಿಯಲ್ಲಿ ಯಾವುದೇ ಸುಳ್ಳು ಮಾಹಿತಿಯನ್ನು ಒದಗಿಸುವಂತಿಲ್ಲ. ಒಂದು ವೇಳೆ ಅರ್ಜಿಯಲ್ಲಿ ಸುಳ್ಳು ಮಾಹಿತಿ ಒದಗಿಸಿದ್ದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.

**ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10/01/2024**
**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24/01/2024**

**<u>ತಾಂತ್ರಿಕ ಸಿಬ್ಬಂದಿಗಳ ವಿವರ ಈ ಕೆಳಕಂಡಂತೆ ಇರುತ್ತದೆ</u>**

| Sl No | Post Name | No. of posts | Maximum Salary per month |
|---|---|---|---|
| 1 | Cyber Security Analyst | 8 | 75,000 |
| 2 | Digital Forensic Analyst | 8 | 50,000 |

**ವಿದ್ಯಾರ್ಹತೆ**

| Sl No | Post Name | Qualification |
|---|---|---|
| 1 | Cyber Security Analyst | B.E/B.Tech/B.C.A/M.Sc/M.C.A in Information Technology/ Computer Science/ Electronics & Communication/ Telecommunications and any equivalent or relevant degree |
| 2 | Digital Forensic Analyst | B.E/B.Tech/B.C.A/M.Sc/M.C.A in Information Technology/ Computer Science/ Electronics & Communication/ Telecommunications and any equivalent or relevant degree. |

**Note**: Minimum 60% aggregate

**ಅನುಭವ/ಅರ್ಹತೆ**

| Sl No | Post Name | Experience/Certification |
|---|---|---|
| | Age Limit Minimum 25 | Age Limit Minimum 25 to maximum 35 |
| 1 | Cyber Security Analyst | **Desired Certifications:**<br>• ISO 270001 Lead Auditor<br>• PG Diploma/Diploma Certificate/Certificate course in Information Security/Cyber Security<br>• EC-Council Certified Ethical Hacker<br>• $(ISC)^2$ CISSP<br>• Certificate Course on Cyber Security & Cloud Computing<br>• GIAC Certified Intrusion Handler (GCIH)<br>• GIAC Certified Forensic Examiner (GCFE)<br>• GIAC Advanced Smartphone Forensics (GASF)<br>• GIAC Certified Forensic Analyst (GCFA) |
| 2 | Digital Forensic Analyst | **Desired Certifications:**<br>• Cerificate Course on Cyber Law/Cyber Forensic from any reputed institution<br>• EC-Council Computer Hacking Forensic Investigator (CHFI)<br>• Certified Forensic Computer Examiner (CFCE)<br>• Certified Computer Examiner (CCE)<br>• Access Data Certified Examiner (ACE)<br>• EnCase Certified Examiner (EnCE) |

| • Sl No | • Post Name | Key Responsibilities And Required Skill Sets |
|---|---|---|
| 1 | Cyber Security Analyst | • Ability to independently evaluate multiple operating systems (Windows, Linux & Mac), Network configurations, network architectures and topologies for identifying attacks/ vulnerabilities<br>• Demonstrate in-depth knowledge of network capturing/assessing tools used to analyse traffic at the application layer, network layer, translating it to identify and interpret inconsistent/anomalous activities<br>• Ability to analyse security logs from firewalls, IPS, IDS, etc<br>• Understanding of mobile phone architecture and its operating system (Symbian, Windows, Android, IOS, etc.)<br>• Knowledge of cryptography and associated algorithms<br>• Knowledge of ISO 27001<br>• Ability to establish and present a timeline of the attacker's activities<br>• Good understanding of Cyber Kill Chain and MITRE ATTACK knowledge base<br>• Contemporary knowledge related to malicious software such as virus, worms, RATs, trojans, etc. to understand their structure/signature/behavior<br>• Good understanding of Windows internals<br>• Thorough understanding of cyber security breach handling procedures (e.g. NIST, SWDGE, etc.)<br>• Contemporary knowledge about cybercrimes & cyber security breach incidents at national and global level<br>• Understanding of security and surveillance systems<br>• Knowledge related to application and system security<br>• Strong verbal and written communication skills in English & Kannada<br>• Ability to translate the findings & learnings into summary document<br>• Ability to write scripts (e.g. Python) would be an added advantage |
| 2 | Digital Forensic Analyst | • Knowledge of various digital storage devices, Computer & mobile operating systems<br>• Ability to understand the fundamental concepts and technologies involved in Disk & mobile forensics<br>• Thorough understanding of different file systems FAT/NTFS/exFAT/HFS etc<br>• Ability to carry out acquisition, analysis process on the mobile phones, hard disk, SSD etc<br>• Knowledge of mobile device wireless communication technologies (3G/4G/5G)<br>• Analysing the Data on a variety of conventional phones/smart phones<br>• Understanding of the limitations of existing methods for extracting Data from the devices<br>• Conducting forensic analysis combined with an ability to accurately record full documentation in support of the investigation |

| | | |
|---|---|---|
| | | • Ability for capturing network Data, collection, distribution, analysis and presentation<br>• Ability to establish and present a timeline of attacker's activities<br>• Collect important artefacts like those relating to process running disk encryption key, chat records and active network connection<br>• Perform memory forensics, analysis and extract artefacts<br>• Document process, procedure and reports pertaining to incident detection and response related to memory<br>• Ability to acquire memory/RAM from various OS (Windows, Linux, Mac) and devices (desktops, Laptops, Tablets etc.)<br>• Understanding of open source forensics tools such as Volatility framework, Redline etc. for analysis of RAM dumps<br>• Evidence management and chain of custody to ensure that the continuity and integrity of evidence is preserved<br>• Examine artefacts related to virtualization and various cloud storage applications or services<br>• Knowledge of investigations in virtual environments, cloud forensic models, Architectures, chain of dependencies etc.<br>• Thorough understanding of standard evidence handling procedures<br>• Understanding of legal aspects related to handling of digital evidence<br>• Proficient with digital forensic techniques and the most commonly used computer forensic tools<br>• Good understanding of anti-forensics/Data hiding techniques<br>• Ability to draft questionnaire for sending the seized digital evidence for examination of digital evidence (eg. Central or State FSL)<br>• Exposure of Data security and privacy related issues while handling digital information<br>• Ability to write scripts (e.g. Python) would be an added advantage<br>• Strong verbal and written communication skills in English & Kannada<br>• Ability to translate the findings & learnings into summary document |

**<u>ಗುತ್ತಿಗೆ ನೇಮಕಾತಿ ಬಗ್ಗೆ ಷರತ್ತು ಮತ್ತು ನಿಬಂಧನೆಗಳು</u>**

1. ಸದರಿ ಹುದ್ದೆಯ ಗುತ್ತಿಗೆ ನೇಮಕಾತಿ ಅವಧಿಯು 11 ತಿಂಗಳು ಇದ್ದು, ಇದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ಸಂಚಿತ ವೇತನವನ್ನು ನಿಗಧಿಪಡಿಸಿದ್ದು. ಇದಲ್ಲದೆ, ಇನ್ನಿತರ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
3. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
4. ಗುತ್ತಿಗೆ ನೇಮಕಾತಿ ಕುರಿತ ಸೇವಾನಿಯಮಗಳು, ನ್ಯಾಯಾಲಯಗಳ ಹಾಗೂ ಸರ್ಕಾರದ ಆದೇಶಗಳು ಮತ್ತು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಬದ್ಧರಾಗಿರತಕ್ಕದ್ದು.
5. ಸದರಿ ಗುತ್ತಿಗೆ ನೌಕರರುಗಳು ಮಾಸಿಕ 01 ರಂತೆ ಸಾಂಧರ್ಬಿಕ ರಜೆಯನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.
6. ಸಕ್ಷಮ ಪ್ರಾಧಿಕಾರ ಅನುಮತಿ ಪಡೆಯದೇ ವೈದ್ಯಕೀಯ ಕಾರಣಗಳ ಮೇರೆಗಾಗಲಿ ಅಥವಾ ಬೇರೆ ಕಾರಣಗಳಿಂದಾಗಲೀ ಅನಧಿಕೃತ ಗೈರು ಹಾಜರಿಯಾದಲ್ಲಿ ಗುತ್ತಿಗೆ ಆಧಾರದ ನೇಮಕಾತಿಯು ತಾನಾಗಿಯೇ ರದ್ದಾಗುತ್ತದೆ.
7. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ವೈದ್ಯಕೀಯ ಕಾರಣಗಳ ಮೇರೆಗೆ ಅಥವಾ ಸಮರ್ಥನೀಯ ಕಾರಣಗಳ ಮೇರೆಗೆ ಗುತ್ತಿಗೆ ಆಧಾರದ ಅವಧಿಯಲ್ಲಿ ಒಂದು ತಿಂಗಳಿಗೆ ಮೀರದಂತೆ, ಗೈರುಹಾಜರಾದಲ್ಲಿ ಗುತ್ತಿಗೆ ನೇಮಕಾತಿ ರದ್ದಾಗುವುದಿಲ್ಲ. ಆದರೆ ಈ ಅವಧಿಯನ್ನು ಕರ್ತವ್ಯ ರಹಿತ ದಿನಗಳೆಂದು (ಡೈಸ್ ನಾನ್) ಪರಿಗಣಿಸಲಾಗುವುದು ಮತ್ತು ಅವರು ಈ ಅವಧಿಗೆ ಯಾವೂದೇ ವೇತನ ಮತ್ತು ಇತರೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
8. ಗುತ್ತಿಗೆ ನೌಕರರು ಕರ್ತವ್ಯವನ್ನು ಶ್ರದ್ದೆ ಮತ್ತು ಆಸಕ್ತಿಯಿಂದ ನಿರ್ವಹಿಸುವುದು.
9. ಗುತ್ತಿಗೆ ನೌಕರನು ಕರ್ತವ್ಯವನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯು ಗೌಪ್ಯತೆಯನ್ನು ಕಾಪಡುವುದು.
10. ಈ ಸಂಬಂಧ ಗೌಪ್ಯತೆಯನ್ನು ಕಾಪಡಲು ವಿಫಲವಾದಲ್ಲಿ ಅಥವಾ ಸೋರಿಕೆ ಮಾಡಿದ್ದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.
11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ರದ್ದಾಗುತ್ತದೆ.
12. ಗುತ್ತಿಗೆ ನೌಕರನು ದುರ್ನಡತೆ, ನಿರ್ಲಕ್ಷತೆ, ಉದಾಸೀನತೆಯಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾದಲ್ಲಿ ಸದರಿ ವೆಚ್ಚವನ್ನು ಸರ್ಕಾರಕ್ಕೆ ತುಂಬಿಕೊಡಲು ನೌಕರನು ಹೊಣೆಯಾಗಿರುತ್ತಾನೆ.
13. ಗುತ್ತಿಗೆ ನೌಕರರು ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಬೇರೆ ಇತರೆ ಯಾವುದೇ ಸಂಸ್ಥೆಗಳಲ್ಲಿ ಪೂರ್ಣ/ ಅರೆಕಾಲಿಕ ವೃತ್ತಿಗಳನ್ನು ಮಾಡಬಾರದು.
14. ಈ ನೇಮಕಾತಿ ಆದೇಶವನ್ನು ಸ್ವೀಕರಿಸಿ ದಿನಾಂಕದಿಂದ 07 ದಿನಗಳ ಒಳಗಾಗಿ ನೂರು ರೂಪಾಯಿಗಳ ಛಾಪಾಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ದ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳಲಾಗುವುದು.

Signed by Chandragupta
Date: 08-01-2024 16:45:24
Reason: Approved

ಅಧ್ಯಕ್ಷರು,
ನೇಮಕಾತಿ ಸಮಿತಿ
ಅಪರ ಪೊಲೀಸ್ ಆಯುಕ್ತರು,
ಅಪರಾಧ ಬೆಂಗಳೂರು ನಗರ.

ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ: COPBCP/EST/EST3(MISC)/34/2023

ಪೊಲೀಸ್ ಆಯುಕ್ತರವರ ಕಛೇರಿ
ಬೆಂಗಳೂರು ನಗರ

## ಪೊಲೀಸ್ ಇಲಾಖೆಯ ತಾಂತ್ರಿಕ ಹುದ್ದೆಗಳ ನೇಮಕಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ 16 ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ (Contract Basis) ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಹುದ್ದೆ | ಹುದ್ದೆಗಳ ಸಂಖ್ಯೆ |
|---|---|
| ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ | 8 |
| ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ | 8 |

**ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10.01.2024 ಬೆಳಿಗ್ಗೆ 10.00 ಗಂಟೆಯಿಂದ**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.01.2024 ಸಂಜೆ 06:00 ಗಂಟೆಯಿಂದ**

ಮೇಲ್ಕಂಡ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪೊಲೀಸ್ ಇಲಾಖೆಯ ಅಂತರ್ಜಾಲ https://ksp.karnataka.gov.in ರಲ್ಲಿ ಮತ್ತು ಪೊಲೀಸ್ ಆಯುಕ್ತರ ಅಂತರ್ಜಾಲ www.bcp.gov.in ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ವೆಬ್ ಸೈಟ್‌ಗಳ ಮುಖಾಂತರ ವಿವರಗಳನ್ನು ಪಡೆದು ಅರ್ಜಿಗಳನ್ನು ಈ ಕಛೇರಿಯ ವಿಳಾಸ: ನಂ.01, ಇನ್‌ಫೆಂಟಿ ರಸ್ತೆ, ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು-560001 ಕ್ಕೆ ಅಥವಾ ಇಲಾಖೆಯ ಇ-ಮೇಲ್ dcpadminbcp@ksp.gov.in ಗೆ ಸಲ್ಲಿಸುವುದು.

Signed by Chandragupta
Date: 10-01-2024 17:59:18
Reason: Approved

(ಡಾ|| ಚಂದ್ರಗುಪ್ತ, ಐ.ಪಿ.ಎಸ್)
ಅಪರ ಪೊಲೀಸ್ ಆಯುಕ್ತರು
(ಅಪರಾಧ) ಬೆಂಗಳೂರು ನಗರ.